ಅ.ದಾ. ನಂ.348/2020 ಪಿ .ಡಬ್ಲ್ಯೂ-2

ದಿನಾಂಕಃ 03.06.2026 ರಂದು ಪಿ.ಡಬ್ಲ್ಯೂ-2 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆಯೇ ಎಂದರೆ ಇಲ್ಲ. ಈ ದಿನ ನನ್ನನ್ನು ವಾದಿ ಕರೆದುಕೊಂಡು ಬಂದಿರುತ್ತಾರೆ. ಯಾವ ಕಾರಣಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ವಾದಿಯಿಂದ ಪ್ರತಿವಾದಿ ಮಾರಾಟಕ್ಕಾಗಿ ಮಾತುಕತೆ ಮಾಡಿ ಕ್ರಯದ ಕರಾರಿನಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ 7 ನ್ನು ಯಾರು ಯಾರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಪ್ರತಿವಾದಿ ವಾದಿಗೆ ಮಾಡಿಕೊಟ್ಟಿರುತ್ತಾರೆ. ಸ.ನಂ.106/2 ಕ್ಕೆ ಸಂಬಂಧಪಟ್ಟಂತೆ ಕ್ರಯದ ಕರಾರಾಗಿರುತ್ತದೆ. ದಿ.11.02.2020 ರಂದು ಕ್ರಯದ ಕರಾರು ಪತ್ರ ತಯಾರಿಸಿರುತ್ತಾರೆ. ದಿ.13.02.2020 ರಂದು ನೋಂದಣಿ ಮಾಡಿಸಿರುತ್ತಾರೆ. ಯಾವ ದಿನಾಂಕ ಸಹಿ ಮಾಡಿರುತ್ತೀರ ಎಂದರೆ ದಿ.13..02.2020 ರಂದು ನೋಂದಣಿ ಕಛೇರಿಯಲ್ಲಿ. ನಾನು ನೋಂದಣಿ ಕಛೇರಿಗೆ ಹೋಗುವ ಮೊದಲೇ ಕ್ರಯದ ಕರಾರು ತಯಾರಾಗಿತ್ತ ಎಂದರೆ ಇಲ್ಲ. ನಿಪಿ 7 ಕ್ಕೆ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದರೆ ವಾದಿ, ಪ್ರತಿವಾದಿ ಸಹಿ ಮಾಡಿದ ನಂತರ ನಾನು ಸಹಿ ಮಾಡಿರುತ್ತೇನೆ. ಉಳಿದವರ ಸಹಿ ಬಗ್ಗೆ ಗೊತ್ತಿರುವುದಿಲ್ಲ.

2. ನೋಂದಣಿ ಕಛೇರಿಯಲ್ಲಿ ಪತ್ರವನ್ನು ವಾದಿ ತಂದಿರುತ್ತಾರ ಎಂದರೆ ಇಲ್ಲ, ವಾದಿ ಮತ್ತು ಪ್ರತಿವಾದಿ ಇಬ್ಬರೂ ತಂದಿರುತ್ತಾರೆ. ದಿ.13.02.2020 ರಂದು ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಹಣಕಾಸಿನ ವ್ಯವಹಾರ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟದ ಬಗ್ಗೆ ತಿಳಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ನಡುವೆ ಆಗಿರುವ ವ್ಯವಹಾರದ ಬಗ್ಗೆ ಗೊತ್ತ ಎಂದರೆ ಇಲ್ಲ.

3. ಪ್ರತಿವಾದಿ ಯಾವಾಗ ಹಣ ನೀಡಿರುತ್ತಾರೆ ಎಂದರೆ 1 ಲಕ್ಷ ಹಣವನ್ನು ಚೆಕ್

ಮೂಲಕ 2 ಲಕ್ಷ ಹಣವನ್ನು ನಗದಾಗಿ ನೋಂದಣಿ ದಿನ ನೀಡಿರುತ್ತಾರೆ. ಬಾಕಿ ಎಷ್ಟು ಹಣ ಉಳಿದಿರುತ್ತದೆ ಎಂದರೆ 50 ಸಾವಿರ ನೋಂದಣಿ ಸಮಯದಲ್ಲಿ ನೀಡುವುದಾಗಿ ಒಪ್ಪಿಕೊಂಡಿರುತ್ತಾರೆ.

4. ನಿಪಿ 7 ಆಗುವ ಪೂರ್ವದಲ್ಲಿ ಪ್ರತಿವಾದಿಯ ಪರಿಚಯ ಇರುತ್ತದೆಯೇ ಎಂದರೆ ಆಲೂರಿಗೆ ಬಂದಾಗ ಒಮ್ಮೆ ಪರಿಚಯ ಆಗಿರುತ್ತಾರೆ. ದಿ.11.02.2020 ರ ಒಂದು ವಾರದ ಪೂರ್ವದಲ್ಲಿ ಪರಿಚಯ ಆಗಿರುತ್ತಾರೆ. ವಾದಿ ನನ್ನ ಸ್ನೇಹಿತರಾಗಿರುವ ಕಾರಣ ನಿಪಿ 7 ಕ್ಕೆ ಸಹಿ ಮಾಡಿರುತ್ತೇನೆ, ವಾದಿ ಮತ್ತು ಪ್ರತಿವಾದಿಯ ನಡುವೆ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿರುವುದಿಲ್ಲ ಮತ್ತು ನಿಪಿ 7 ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ವಾದಿಯು ಪ್ರತಿವಾದಿಗೆ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.